ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಕೇಂದ್ರ ಸರ್ಕಾರಕ್ಕೆ ಹಸ್ತಾಂತರಿಸುವ ಬಗ್ಗೆ.

೧೫೯೨. ಶ್ರೀ ಡಿ. ಟಿ. ಜಯಕುಮಾರ್. (ನಂಜನಗೂಡು).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿಯ ವಿ ಐ. ಎಸ್. ಎಲ್. ಕಾರ್ಖಾನೆಯನ್ನು ಕೇಂದ್ರ ಸರ್ಕಾರಕ್ಕೆ ಪಡಿಸಲು ರಾಜ್ಯ ಸರ್ಕಾರವು ಯೋಚಿಸಿದೆಯೇ ?

ಆ) ಹಾಗಿದ್ದಲ್ಲಿ ರಾಜ್ಯ ಸರ್ಕಾರದ ಪರತ್ತುಗಳೇನು ?

ಇ) ಸರ್ಕಾರದ ಹಾಲಿ ಕಾರ್ಮಿಕ ಉದ್ಯೋಗಕ್ಕೆ ತೊಂದರೆಯಾಗದಂತೆ ಎಚ್ಚರಿಕೆ ಪಡಿಸಲು ಕ್ರಮ ಕೈಗೊಳ್ಳುವುದೆ ?

ಶ್ರೀ ಜೆ. ಹೆಚ್. ಪಟೇಲ್.—(ಭಾರಿ ಹಾಗೂ ಮಧ್ಯಮ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು.)

ಅ) ಹೌದು.

ಆ) ರಾಜ್ಯ ಸರ್ಕಾರವು ಅಧಿಕೃತವಾತ ಈ ತನಕ ಯಾವ ಪರತ್ತುಗಳನ್ನೂ ಪಾಡಿಲ್ಲ.

ಇ) ಸಮಗ್ರ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಹಾಲಿ ಕಾರ್ಮಿಕ ಉದ್ಯೋಗಕ್ಕೆ ತೊಂದರೆಯನ್ನು ತಪ್ಪಿಸಲು ರಾಜ್ಯ ಸರ್ಕಾರವು ಸಾಧ್ಯವಾದಷ್ಟು ಎಲ್ಲ ಕ್ರಮವನ್ನು ಕೈಗೊಳ್ಳುತ್ತದೆ.

ಚುಕ್ಕೆ ಪ್ರಶ್ನೆ ಸಂಖ್ಯೆ ೫೭೫ (೧೫೯೨)

(ಶ್ರೀ ಡಿ.ಟಿ. ಜಯಕುಮಾರ್‌ರವರ ಪರವಾಗಿ ಮಾನ್ಯ ಸದಸ್ಯರಾದ ಶ್ರೀ ಆರ್. ವೆಂಕಟರಾಮಯ್ಯ ನವರು ಪ್ರಶ್ನೆಯನ್ನು ಕೇಳಿದರು.)

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಈ ಕಂಪನಿಯಲ್ಲಿ ಆಕ್ಯುಮುಲೇಟೆಡ್ ಲಾಸ್ ಎಷ್ಟು ಇದೆ ಎಂಬ ಪ್ರಶ್ನೆಯನ್ನು ಕೇಳುತ್ತೇನೆ. ಎರಡನೆಯದಾಗಿ, ಎಲೆಕ್ಟ್ರಿಸಿಟಿ ಸಪ್ಲೈ ಇಲ್ಲವೆಂದು ಕಂಪನಿಯ ಎರಡನೇ ಮತ್ತು ಮೂರನೇ ವಿಭಾಗವು ಕೆಲಸ ಮಾಡದೆ ಮುಚ್ಚಲ್ಪಟ್ಟಿರುವುದನ್ನು ಮಾನ್ಯ ಮಂತ್ರಿಯವರು ಒಪ್ಪಿಕೊಳ್ಳುತ್ತಾರೆಯೇ ? ಸಾಕಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಕೊಟ್ಟರೆ ಈ ಕಂಪನಿಯು ಲಾಭದಲ್ಲಿ ನಡೆಯುವುದಿಲ್ಲವೇ ? ಇನ್ನು ಮೂರನೆಯದಾಗಿ, ಮಾನ್ಯ ಕೇಂದ್ರದ ಸಚಿವರಾದ ಶ್ರೀ ಜಾಫರ್ ಶರೀಫ್‌ರವರು ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದರು. ಆ ಸ್ಟೇಟ್‌ಮೆಂಟ್ ಪ್ರಕಾರ ರಾಜ್ಯ ಸರ್ಕಾರದವರು ವಿ. ಐ. ಎಸ್. ಎಲ್.ನ್ನು ಕೇಂದ್ರ ಸರ್ಕಾರಕ್ಕೆ ಪಡಿಸಿಕೊಡುವುದಕ್ಕೆ ಕ್ಯಾಬಿನೆಟ್ ಡಿಸೀಷನ್ ತೆಗೆದುಕೊಂಡರೆ ಈ ಕಾರ್ಖಾನೆಯನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳುವುದಕ್ಕೆ ಸಿದ್ಧವಿದೆಯೆಂದು ಹೇಳಿದ್ದಾರೆ. ಇದು ನಮ್ಮ ಕರ್ನಾಟಕ ರಾಜ್ಯಕ್ಕೆ ಪ್ರೆಸ್ಟೀಜಿಯಸ್ ಇಂಡಸ್ಟ್ರೀ ಆಗಿದೆ. ಇಲ್ಲಿ ಬಹಳ ಅವ್ಯವಸ್ಥೆ ಇದೆ. ಈ ಅವ್ಯವಸ್ಥೆಗಳನ್ನು ಹೋಗಲಾಡಿಸಬೇಕು. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರೆಂದು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಏನು ಇದೆಯೋ, ಅದನ್ನು ಭಾರತೀಯ ಉಕ್ಕು ಪ್ರಾಧಿಕಾರಕ್ಕೆ ಪಡಿಸಿ ಕೊಡಲು ಕಳೆದ ಒಂದೂವರೆ ವರ್ಷದಿಂದಲೂ ಬಹಳ ತೀವ್ರವಾಗಿ ಪ್ರಯತ್ನ ಮಾಡುತ್ತಿದ್ದೇವೆ. ಪ್ರಾರಂಭದಲ್ಲಿ, ಈ ಕಂಪನಿಯನ್ನು ಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಆಸಕ್ತಿ ತೋರಿಸಲಿಲ್ಲ. ಈಗ ಆಸಕ್ತಿ ತೋರಿಸುತ್ತಿದೆ. ನಾನು ಒಂದೆರಡು ಸಾರಿ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿ ವಿಷಯವನ್ನು ತಿಳಿಸಿದ್ದೇನೆ. ನಮ್ಮ ರಾಜ್ಯದ ಎಲ್ಲಾ ಪಕ್ಷದ ಸಂಸತ್ ಸದಸ್ಯರುಗಳು ಪ್ರಧಾನ ಮಂತ್ರಿಗಳನ್ನು ಹಾಗೂ ಸಂಬಂಧಪಟ್ಟ ಮಂತ್ರಿಗಳನ್ನು ಕಂಡು ಈ ಕಂಪನಿಯನ್ನು ಕೇಂದ್ರ ಸರ್ಕಾರ ಪಡಿಸಿಕೊಳ್ಳಬೇಕೆಂದು ಹೇಳಿದ್ದಾರೆ.

ಇದು ನಮ್ಮ ರಾಜ್ಯದ ಹೆಮ್ಮೆಯ ಒಂದು ಕಾರ್ಖಾನೆ ಮತ್ತು ಬಹಳ ಹಿಂದ ಸ್ಥಾಪನೆಯಾದ ಕಾರ್ಖಾನೆ ಇದು. ಇದನ್ನು ಪುನರ್ವಸತಿಗೊಳಿಸಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಈಗ ಅದಕ್ಕೆ ಪೂರಕವಾದಂಥ ಸಹಾಯ ಬಂದಿದೆ. ಅಂದರೆ, ಅವರು ಯಾವಾಗ ಈ ಕಂಪನಿಯನ್ನು ತೆಗೆದು ಕೊಳ್ಳುತ್ತಾರೆಂದು ನಾನು ನಿಖರವಾಗಿ ಹೇಳಲಾರೆ. ಮೊನ್ನೆ ಅಂದರೆ ಇದೇ ತಿಂಗಳು ೧೨ನೇ ತಾರೀಖು ಉಕ್ಕು ಇಲಾಖೆಯ ಮಂತ್ರಿಗಳು ಇದಕ್ಕೆ ಸಂಬಂಧಪಟ್ಟಂಥ ಉನ್ನತ ಅಧಿಕಾರಿಗಳನ್ನು ಕರೆದು ವಿಚಾರ ಮಾಡಿದ್ದಾರೆ. ನಗೋಶಿಯೇಷನ್ ಎಂದು ಏನಂ ಕರೆಯುತ್ತೇವೆಯೋ ಅದು ಈಗ ಹೈಯಸ್ಟ್ ಲೆವೆಲ್‌ನಲ್ಲಿ ನಡೆಯುತ್ತಿದೆ. ಈ ಸಮಸ್ಯೆ ಬಗೆಹರಿಯುತ್ತದೆಂದು ನನಗೆ ಭರವಸೆ ಇದೆ. ಈ ಕಂಪನಿಗೆ ಇರತಕ್ಕ ರೋಗಗಳಲ್ಲಿ ವಿದ್ಯುಚ್ಛಕ್ತಿಯದು ಒಂದೇ ಅಲ್ಲ. ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಅದಕ್ಕೆ ಕಲವಾರು ಕಾರಣಗಳಿವೆ. ಅವುಗಳನ್ನು ಪ್ರಸ್ತಾಪ ಮಾಡುತ್ತಾ ಹೋದರೆ ಸಮಸ್ಯೆ ಬಗೆಹರಿಯವುದಿಲ್ಲ. ನಮ್ಮ ರಾಜ್ಯ ಸರ್ಕಾರದ ಇಚ್ಛೆ ಏನೆಂದರೆ, ಈಗಿರುವ ರೋಗಗಳನ್ನು ತೆಗೆದು ಆದಷ್ಟು ಬೇಗ ಇದನ್ನು ಕಾರ್ಯಾರಂಭ ಮಾಡಬೇಕೆಂಬ ಇಚ್ಛೆ ಇದೆ. ಈಗಾಗಲೇ ಕೆಲವು ಭಾಗಗಳಲ್ಲಿ ಕೆಲಸ ನಡೆಯುತ್ತಿದೆ. ವಿದ್ಯುಚ್ಛಕ್ತಿ ಅಭಾವದಿಂದ ಮತ್ತು ರಾ-ಮೆಟೀರಿಯಲ್ ಅಭಾವದಿಂದ ಮಾತ್ರ ಈ ಕಂಪನಿಯ ಕೆಲಸ ನಿಂತಿರಲಿಲ್ಲ. Modernisation of technology and labour force is much more than the industry could bear. ಇದರ ಬಗ್ಗೆ ನಾವು ಆಲೋಚನೆ ಮಾಡಬೇಕಾಗುತ್ತದೆ. ಹೀಗೆ ಸಮಗ್ರವಾಗಿ ಇದನ್ನು ರೋಗದಿಂದ ಮುಕ್ತ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಸೇಲ್‌ನವರು (ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿ.) ಯಾವ ಪತ್ರವನ್ನು ಹಾಕಿದ್ದಾರೋ, ಅದರ ಪ್ರಕಾರ ಎಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಕೊಡಬೇಕು, ಎಷ್ಟು ಜನ ಕಾರ್ಮಿಕರನ್ನು ತೆಗೆಯಬೇಕು ? ಎಂಬ ಬಗ್ಗೆ ಚರ್ಚೆಗಳು ನಡೆಯುತ್ತಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನವರು ಈ ಕಂಪನಿಯನ್ನು ತೆಗೆದುಕೊಳ್ಳುವುದಕ್ಕೆ ಪೂರ್ತುಕತೆಯಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಪರಾತುಕತೆ ಮಾಡುವುದಕ್ಕಿಂತ ಮುಂಚೆ ಏನಾದರು ಪಿ.ಲಿಮಿನರಿಯಾಗಿ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನವರ ಎಕ್ಸ್‌ಪರ್ಟ್ ಕಮಿಟಿ ಏನಾದರು ಭದ್ರಾವತಿಗೆ ಭೇಟಿ ಕೊಟ್ಟಿತ್ತೇ ಹೇಗೆ ?

೨-೦೦ ಪಿ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸೆಯಿಲ್‌ನವರು ಎಕ್ಸ್‌ಪರ್ಟ್ ಕಮಿಟಿಯನ್ನು ಭದ್ರಾವತಿಗೆ ಕಳುಹಿಸಿಕೊಟ್ಟಿದ್ದಾರೆ. ಅವರು ಸಂದರ್ಶನವನ್ನು ಕೊಟ್ಟಿದ್ದನ್ನು ನೋಡಿದರೆ ಅವರಿಗೆ ಈ ಬಗ್ಗೆ ಇರುವ ಆಸಕ್ತಿಯನ್ನು ತೋರಿಸುತ್ತದೆ.....

ಶ್ರೀ ಜೆ. ಎಚ್. ಪಟೇಲ್.—ಸೆಯಿಲ್ ತಜ್ಞರ ಸಮಿತಿ ಭದ್ರಾವತಿಗೆ ಬಂದು ನೋಡಿ, ಆ ಕಾರ್ಖಾನೆಯು ವಹಿಸಿಕೊಳ್ಳುವುದಕ್ಕೆ ಯೋಗ್ಯವಾದಂಥಾದ್ದು ಮತ್ತು ಆ ಸ್ಥಿತಿಯಲ್ಲಿದೆ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಸರಕಾರದವರು ಆ ಕಾರ್ಖಾನೆಗೆ ಈಗ ಕೇವಲ ೧೫ ಪರ್ಸೆಂಟ್ ನಷ್ಟು ಮಾತ್ರ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡುತ್ತಿದ್ದಾರೆ. ಆ ಕಾರ್ಖಾನೆಯಲ್ಲಿ ತಯಾರಾಗುವಂಥ ಸ್ಪೆಶಲ್ ಸ್ಟೀಲ್, ಮತ್ತು ಡಿಫೆನ್ಸ್ ಪೂರೈಕೆಗೆ ಯೋಗ್ಯವಾದಂಥ ಸ್ಟೀಲ್‌ಗಳನ್ನು ತಯಾರು ಮಾಡುವುದಕ್ಕೆ ಅವರಿಗೆ ವಿದ್ಯುಚ್ಛಕ್ತಿಯ ಕೊರತೆ ಇದೆ. ಆ ಕಾರ್ಖಾನೆಯಲ್ಲಿ ಉತ್ತಮ ತರಹದ ಸ್ಟೀಲ್‌ನ ತಯಾರಿಕೆ ಮಾಡುವಂಥ ಅವಕಾಶ ಇದೆ ಮತ್ತು ಮಾಡುತ್ತಾರೆ. ಆದರೆ ಅದು ವಿದ್ಯುಚ್ಛಕ್ತಿ ಆಧಾರಿತ ಇಂಡಸ್ಟ್ರೀ ಆಗಿರುವುದರಿಂದ ಅದಕ್ಕೆ ಹೆಚ್ಚಿನ ವಿದ್ಯುತ್ತಿನ ಅಗತ್ಯತೆ ಇದೆ. ಅವರಿಗೆ ಹೆಚ್ಚಿನ ವಿದ್ಯುತ್ತನ್ನು ಪೂರೈಕೆ ಮಾಡಿದರೆ ಕೆಲವು ಓವನ್‌ಗಳು ಏನು ಬಂದ್ ಆಗಿ ಹೋಗಿವೆ, ಅದನ್ನು ಪುನಃ ಪ್ರಾರಂಭ ಮಾಡಿ ಇನ್ನೂ ಹೆಚ್ಚು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಮಾನ್ಯ ಸಚಿವರು ಆಲೋಚನೆ ಮಾಡಬೇಕು.

ಶ್ರೀ ಜೆ. ಎಚ್. ಪಟೀಲ್.—ಮಾನ್ಯ ಅಧ್ಯಕ್ಷರೆ, ಈಗಿನ ಪರಿಸ್ಥಿತಿಯಲ್ಲಿ ಅವರಿಗೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ರಾಜ್ಯದ ವಿದ್ಯುಚ್ಛಕ್ತಿಯ ಸಾಮರ್ಥ್ಯತೆಯನ್ನು ಲಕ್ಷದಲ್ಲಿಟ್ಟುಕೊಂಡರೆ ಅವರಿಗೆ ಬೇಕಾದಷ್ಟು ಕೊಡುವ ಸ್ಥಿತಿಯಲ್ಲಿಲ್ಲ. ಆದರೆ ಕಾರ್ಯಾನೆಯನ್ನು ಪಯಬಲ್ ಆಗಿ ನಡೆಸುವುದಕ್ಕೆ ಎಷ್ಟು ವಿದ್ಯುಚ್ಛಕ್ತಿ ಬೇಕು ಅಷ್ಟು ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ.

ಚಿಂಚೋಳಿ ತಾಲ್ಲೂಕಿನಲ್ಲಿ ಗ್ರಾಮಗಳ ವಿದ್ಯುದ್ದೀಕರಣದ ಬಗ್ಗೆ

೧೮೬೯. ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).— ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಂಚೋಳಿ ತಾಲ್ಲೂಕಿನಲ್ಲಿ ೧೯೮೮ನೇ ಮಾರ್ಚ್ ಮಾಹೆಯ ಅಂತ್ಯದವರೆಗೆ ಎಷ್ಟು ಗ್ರಾಮಗಳನ್ನು ಸರಕಾರದಿಂದ ವಿದ್ಯುದ್ದೀಕರಣ ಮಾಡಲಾಗಿದೆ.

ಆ) ವಿದ್ಯುತ್ ಸಂಪರ್ಕ ಹೊಂದದೆ ಇರುವ ಹಳ್ಳಿಗಳು ಹಾಗೂ ತಾಂಡಾಗಳ ಹೆಸರುಗಳೇನು ? (ವಿವರ ನೀಡುವುದು)

ಇ) ಇವುಗಳನ್ನು ಯಾವಾಗ ವಿದ್ಯುದ್ದೀಕರಣಗೊಳಿಸಲಾಗುವುದು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ೧೩೧ ಕಂದಾಯ ಗ್ರಾಮಗಳು.

ಆ) ಈಗ ಈ ತಾಲ್ಲೂಕಿನಲ್ಲಿ ಜನವಾಸವಿರುವ ಎಲ್ಲಾ ಕಂದಾಯ ಗ್ರಾಮಗಳು ವಿದ್ಯುದ್ದೀಕರಣವಾಗಿದೆ. ವಿದ್ಯುದ್ದೀಕರಣಕ್ಕೆ ಮಂಜೂರಾತಿ ದೊರಕಿದ್ದು ಹಾಲಿ ವಿದ್ಯುದ್ದೀಕರಣ ವಾಗಬೇಕಾಗಿರುವ ೪೦ ತಾಂಡಾಗಳ ಹೆಸರನ್ನು ಅನುಬಂಧದಲ್ಲಿ ನೀಡಿದೆ (ತಾಂಡಾಗಳನ್ನು ಪರಿಶಿಷ್ಟ ವರ್ಗದವರ ಕಾಲೋನಿಗಳೆಂದು ಕರೆಯಲಾಗಿದೆ)

ಇ) ಇವುಗಳನ್ನು ೧೯೮೮-೮೯ನೇ ಸಾಲಿನಲ್ಲಿ ವಿದ್ಯುದ್ದೀಕರಣಗೊಳಿಸುವ ನಿರೀಕ್ಷೆ ಇದೆ.

ಅನುಬಂಧ

ಚಿಂಚೋಳಿ ತಾಲೂಕಿನಲ್ಲಿ ವಿದ್ಯುದ್ದೀಕರಣಕ್ಕೆ ಮಂಜೂರಾತಿ ದೊರಕಿದ್ದು ವಿದ್ಯುದ್ದೀಕರಣವಾಗಬೇಕಾಗಿರುವ ತಾಂಡಾ (ಪರಿಶಿಷ್ಟ ವರ್ಗದವರ ಕಾಲೋನಿ)ಗಳ ಹೆಸರು

ಕ್ರಮ ಸಂಖ್ಯೆ	ತಾಂಡಾದ ಹೆಸರು	ಗ್ರಾಮದ ಹೆಸರು
೧	ಧಂಗಿನಾಯಕನ ತಾಂಡ	ಮೋಘ್
೨	ರಮಾಚಂದ್ರ ನಾಯಕನ ತಾಂಡ	ಧುಟ್ಟರಗ
೩	ನಾಗೋ ಇದಲ್ಯೆ ಕಾಲೋನಿ	ಭುಸ್ಕೂರ್ (ಕೆ)
೪	ಹೊಸಹಳ್ಳಿ ಕಾಲೋನಿ	ಹೊಸಹಳ್ಳಿ
೫	ನಲಸಿಂಘ	ಜೆಲ್ವರ್ಗ
೬	ಜೆಲವರ್ಗ	ಜಲ್ವರ್ಗ
೭	ರಾಮಾಸಿಂಘ ನಾಯಕನ ತಾಂಡ	ಪೋಲಕಪಳ್ಳಿ
೮	ದುಂಡಿ ನಾಯಕನಪಾಳ್ಯ	ಸಾಸರಗೊಲ
೯	ಗೇಡಪನಿಡ	ಸಾಲೇಬೀರನಹಳ್ಳಿ